## ನಿಮ್ಮೊಡನೆ

# ಇಂದಿನ ಖುಷಿ, ನಾಳಿನ ಸಂಕಟ ಆಗದಿರಲಿ

> ಸಂಪತ್ತು ಸೃಷ್ಟಿಗೆ ಸಾಲದ ನೆರವು ಬೇಕಾಗುತ್ತದೆ. ಆದರೆ ಈ ಕ್ಷಣದ ಖುಷಿಗಾಗಿ ಮಾಡುವ ಅನುತ್ಪಾದಕ ಸಾಲವು ನಾಳಿನ ನೆಮ್ಮದಿಯನ್ನು ಕಸಿದುಕೊಳ್ಳುವಂತೆ ಆಗಬಾರದು.

ಒಂದು ಕಾಲ ಇತ್ತು. ಸಾಲ ಹುಟ್ಟುವುದಿರಲಿ, 'ನೋಡಿ ಕೊಡ್ತೀನಿ' ಎಂದರೂ ನೂರು ರೂಪಾಯಿ ನೋಟು ಕೈಗೆ ಕೊಡುತ್ತಿರಲಿಲ್ಲ. ಅದರೊಂದಿಗೆ 'ಸಾಲ ಎಂದರೆ ಶೂಲ' ಎಂಬ ಭಾವನೆ ಸಮಾಜದಲ್ಲಿ ಬಲವಾಗಿ ಬೇರೂರಿತ್ತು. ಈಗ ಅತ್ಯಂತ ಸುಲಭವಾಗಿ ಸಿಗುವ ಸೇವೆಗಳ ಸಾಲಿನಲ್ಲಿ ಮೊದಲ ಸ್ಥಾನದಲ್ಲಿ ಇರುವುದೇ 'ಸಾಲ'. ಕೆಲವೇ ನಿಮಿಷಗಳಲ್ಲಿ ಸಾಲ ಮಂಜೂರಾಗುತ್ತದೆ. ಮಂಜೂರಾದ ಮರುಕ್ಷಣವೇ ಸಾಲದ ಮೊತ್ತ ನಿಮ್ಮ ಬ್ಯಾಂಕ್ ಖಾತೆಗೆ ಜಮೆ ಆಗುತ್ತದೆ. ಜತೆಗೆ ಕಿಸೆ ತುಂಬ ಕ್ರೆಡಿಟ್ ಕಾರ್ಡ್‌ಗಳು. ಕಾರ್ಡ್ ಉಜ್ಜಿದರೆ ಸಾಕು, ಸಾಲವಾಗಿ ದುಡ್ಡು ಉದುರುತ್ತದೆ!

ತೀರಾ ಸುಲಭವಾಗಿ ಸಿಗುವ ವಸ್ತುಗಳು ಮತ್ತು ಸೇವೆಗಳು ಸಮಸ್ಯೆಗಳನ್ನೂ ಅಷ್ಟೇ ತ್ವರಿತವಾಗಿ ತಂದೊಡ್ಡಬಲ್ಲವು. ಕೋವಿಡ್ ಅಪ್ಪಳಿಸಿದ ನಂತರದಲ್ಲಿನ ಬಿಕ್ಕಟ್ಟನ್ನು ತಿಳಿಗೊಳಿಸುವ ಉದ್ದೇಶದಿಂದ ಅರ್ಥ ವ್ಯವಸ್ಥೆಯಲ್ಲಿ ಹಣದ ಹೊಳೆಯನ್ನೇ ಹರಿಸಿದ್ದ ಭಾರತೀಯ ರಿಸರ್ವ್ ಬ್ಯಾಂಕ್, ಮೇ ತಿಂಗಳ ನಂತರದಲ್ಲಿ ಬಿಗಿ ಹಣಕಾಸಿನ ನಿಲುವು ತಳೆದಿದೆ. ಅಂಕೆಗೆ ಸಿಗದ ಹಣದುಬ್ಬರ ನಿಯಂತ್ರಿಸುವ ಉದ್ದೇಶದಿಂದ ಈ ಮಾರ್ಗದ ಮೊರೆ ಹೋಗಿದೆ. ವ್ಯವಸ್ಥೆಯಲ್ಲಿನ ಹಣದ ಹರಿವನ್ನು ತಗ್ಗಿಸುವುದು, ಆ ಮೂಲಕ ಹಣದುಬ್ಬರವನ್ನು ಕಡಿಮೆ ಮಾಡುವುದು ಆರ್‌ಬಿಐ ಉದ್ದೇಶ.

ಇಂತಹದೊಂದು ಪರಿಸ್ಥಿತಿ ಎದುರಾಗಿದ್ದಕ್ಕೆ ಕಾರಣವಾಗಿರುವ ಅಂಶಗಳನ್ನು ಮತ್ತು ಅದನ್ನು ನಿಯಂತ್ರಿಸಲು ಆರ್‌ಬಿಐ ಅನುಸರಿಸುತ್ತಿರುವ ನಡೆಯ ಒಳಿತು–ಕೆಡುಕುಗಳ ಬಗೆಗಿನ ಚರ್ಚೆಯನ್ನು ಆರ್ಥಿಕ ತಜ್ಞರಿಗೇ ಬಿಡೋಣ. ಆದರೆ, ಆರ್‌ಬಿಐ ತೀರ್ಮಾನಗಳು ವೈಯಕ್ತಿಕ ಬದುಕಿನ ಮೇಲೆ ಬೀರುತ್ತಿರುವ ಪರಿಣಾಮಗಳತ್ತ ಮಾತ್ರ ಗಮನಹರಿಸೋಣ. ಹಿಂದೆ ಬಹಳ ಸುಲಭವಾಗಿ, ಕಡಿಮೆ ಬಡ್ಡಿಗೆ ಸಿಕ್ಕ ಸಾಲ ಈಗ ದುಬಾರಿಯಾಗಿದೆ. ಸಾಲದ ಮರುಪಾವತಿ ಕಂತುಗಳ ಮೊತ್ತ ಮೇ ನಂತರ ಸತತವಾಗಿ ಹೆಚ್ಚುತ್ತಲೇ ಹೋಗುತ್ತಿದೆ. ಸಾಲದ ಮೇಲಿನ ಬಡ್ಡಿ ಎಷ್ಟಿರಬೇಕು ಎಂಬುದನ್ನು ನಿರ್ಧರಿಸುವ ರೆಪೊ ದರ ಮೇ ನಂತರ ಈವರೆಗೆ ಐದು ಬಾರಿ ಹೆಚ್ಚಾಗಿದೆ. ರೆಪೊ ದರ ಒಟ್ಟು ಶೇ. 2.25ರಷ್ಟು ಹೆಚ್ಚಾಗಿದೆ. ಅಂದರೆ ಸಾಲದ ಮೇಲಿನ ಬಡ್ಡಿ ದರವೂ ಇದೇ ಪ್ರಮಾಣದಲ್ಲಿ ಹೆಚ್ಚಾಗುತ್ತದೆ. ಸುಲಭಕ್ಕೆ ಸಿಗುತ್ತದೆ ಎಂದೂ ಬಡ್ಡಿ ಕಡಿಮೆ ಎಂದೂ ಏನೇನೋ ಉದ್ದೇಶಗಳಿಗೆ ಸಾಲ ಪಡೆದವರಿಗೆ ಈಗ ಅವೇ ಕಂತುಗಳು ಕೈ ಸುಡುತ್ತಿವೆ.

ಸಾಲದ ಮೇಲಿನ ಬಡ್ಡಿ ಹೆಚ್ಚಾಗಿದ್ದಕ್ಕೆ ಸರಿಸಮನಾಗಿ ಠೇವಣಿಗಳ ಮೇಲಿನ ಬಡ್ಡಿ ಹೆಚ್ಚಾಗಿಲ್ಲ ಎನ್ನುವುದನ್ನು ಆರ್‌ಬಿಐ ಅಂಕಿಅಂಶಗಳೇ ಹೇಳುತ್ತಿವೆ. ಮೇ ತಿಂಗಳಿನಿಂದ ಅಕ್ಟೋಬರ್‌ವರೆಗಿನ ಅವಧಿಯಲ್ಲಿ ಸಾಲದ ಮೇಲಿನ ಬಡ್ಡಿ ಶೇ. 1.90ರಷ್ಟು ಹೆಚ್ಚಾಗಿದ್ದರೆ, ಮೇ– ಅಕ್ಟೋಬರ್ ಅವಧಿಯಲ್ಲಿ ಠೇವಣಿಗಳ ಮೇಲಿನ ಬಡ್ಡಿ ಹೆಚ್ಚಾಗಿದ್ದುದು ಸರಾಸರಿ ಶೇ. 0.48 ಮಾತ್ರ. ಸಾಲ ಎಂಬುದು ನಾಳೆ ದುಡಿಯಬಹುದಾದ ಹಣವನ್ನು ಇವತ್ತೇ ಪಡೆದು ಖರ್ಚು ಮಾಡುವುದು. ಉಳಿತಾಯ ಎಂದರೆ ಇವತ್ತಿನ ದುಡಿಮೆಯನ್ನು ನಾಳೆಗಾಗಿಯೂ ಉಳಿಸಿಕೊಳ್ಳುವುದು. ಅನುತ್ಪಾದಕ ಸಾಲ ಮಾಡಿಕೊಂಡವರಿಗೆ ಈ ಮಾತಿನ ಅರ್ಥ ಇಷ್ಟೊತ್ತಿಗಾಗಲೇ ಗೊತ್ತಾಗಿರಬಹುದು. 'ಸಾಲವನು ಕೊಂಬಾಗ ಹಾಲೋಗರುಂಡಂತೆ ಸಾಲಿಗನು ಬಂದು ಎಳೆವಾಗ ಕಿಬ್ಬದಿಯ ಕೀಲು ಮುರಿದಂತೆ...' ಎಂಬ ವಚನದ ಸಾಲು ಇಂತಹ ಹೊತ್ತಲ್ಲಿ ನೆನಪಾಗದೆ ಇದ್ದೀತೇ? ಆದರೆ, ಸರ್ವಜ್ಞನ ಈ ಎಚ್ಚರಿಕೆಯ ಮಾತುಗಳನ್ನು ಎಲ್ಲ ವ್ಯವಹಾರಗಳಿಗೂ ಎಲ್ಲ ಸಂದರ್ಭಗಳಿಗೂ ಅನ್ವಯಿಸಿ ಹೇಳುವುದು ಸಮಂಜಸ ಆಗಲಾರದು.

ಹಳತು ಹೊನ್ನು ಎನ್ನುವ ಮಾತು ಇದೆ. ಹಳೆಯ ಜೀವನಮೌಲ್ಯವೊಂದು ಹೊನ್ನಿನಂತೆ ಕಾಣುವ ಹೊತ್ತು ಇದು. ಐಷಾರಾಮಿ ಬದುಕಿಗಾಗಿ ಮಾಡುವ ಅನುತ್ಪಾದಕ ಸಾಲ ಈ ಹೊತ್ತಿಗೆ ಬೇಡ ಎಂಬ ಮಾತನ್ನು ಕಾರ್ಪೊರೇಟ್ ವಲಯದ ಪ್ರಮುಖರೇ ಹೇಳುತ್ತಿದ್ದಾರೆ. ಖರೀದಿಸಿ, ಮತ್ತಷ್ಟು ಖರೀದಿಸಿ, ಇನ್ನಷ್ಟು ಖರೀದಿಸಿ, ಕ್ರೆಡಿಟ್ ಕಾರ್ಡ್ ಬಳಸಿ ಖರೀದಿಸಿ ಎಂದೆಲ್ಲ ಹೇಳಿದವರೇ ಈಗ ಖರೀದಿಯನ್ನು ಮುಂದೂಡಿ ಎನ್ನುತ್ತಿದ್ದಾರೆ. ಅವರ ಮಾತಿನ ಮರ್ಮ ಅರ್ಥ ಮಾಡಿಕೊಳ್ಳುವುದು ಕಷ್ಟದ ಕೆಲಸವಲ್ಲ. ಶ್ರೀಮಂತ ವರ್ಗದ ಜೀವನಶೈಲಿಯನ್ನು ಅನುಕರಿಸುವ ಧಾವಂತದಲ್ಲಿ ಸಾಲ ಮಾಡಿ ಕಾರು, ಬೈಕು ಕೊಳ್ಳುವ ಮಧ್ಯಮ ವರ್ಗದ ಯುವಪೀಳಿಗೆ ತಮ್ಮ ಅತ್ಯಂತ ಪ್ರಶಸ್ತ ದುಡಿಮೆಯ ಅವಧಿಯನ್ನು ಆಸ್ತಿ ಸೃಷ್ಟಿಗೆ ಬಳಸುವುದು ಜಾಣತನದ ಕೆಲಸ. ಉತ್ಪಾದಕ ಸಾಲ ಒಳ್ಳೆಯದು. ಸಂಪತ್ತು ಸೃಷ್ಟಿಗೆ ಸಾಲದ ನೆರವು ಬೇಕಾಗುತ್ತದೆ. ಆದರೆ ಈ ಕ್ಷಣದ ಖುಷಿಗಾಗಿ ಮಾಡುವ ಸಾಲವು ನಾಳಿನ ನೆಮ್ಮದಿಯನ್ನು ಕಸಿದುಕೊಳ್ಳುವಂತಾಗಬಾರದು.

■ **ಎನ್. ಉದಯಕುಮಾರ್**



ಈಶ್ವರ್